ಶ್ರೀ ಡಿ.ಕೆ.ಶಿವಕುಮಾರ್:- ನಮಗೆ ವಿಧೇಯಕದ ಪ್ರತಿ ಬಂದಿಲ್ಲ.

ಶ್ರೀ ವೈ. ರಾಮಕೃಷ್ಣ:- ನಾನು ಅಬ್ಜೆಕ್ಟ್ ಮಾಡುತ್ತಿಲ್ಲ. ಆದರೆ ಇದನ್ನು ತಂದಿರತಕ್ಕ ಉದ್ದೇಶ ಏನು ಎಂಬುದನ್ನು ತಿಳಿಸಬೇಕಲ್ಲ.

ಅಧ್ಯಕ್ಷರು:- ಇಂಟ್ರೊಡಕ್ಷನ್ ಸ್ಟೇಜ್‌ನಲ್ಲಿ ಅಲ್ಲ. ಇನ್ನೊಂದೆರಡು ಬಿಲ್‌ಗಳಿವೆ. ಅದನ್ನೂ ಮುಗಿಸಿಬಿಡುತ್ತೇನೆ.

3.ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ, 1995.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, 1995ನೇ ಇಸವಿಯ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಪ್ರಸ್ತಾಪ ಏನೆಂದರೆ:

''1995ನೇ ಇಸವಿಯ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ವೈಜನಾಥಪಾಟೀಲ್:- ಮಾನ್ಯ ಅಧ್ಯಕ್ಷರೆ, 1995ನೇ ಇಸವಿಯ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ.

4. ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕ, 1995

ಶ್ರೀ ವೈಜನಾಥಪಾಟೀಲ್:- ಮಾನ್ಯ ಅಧ್ಯಕ್ಷರೆ, 1995ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾಪ ಏನೆಂದರೆ:

''1995ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ವೈಜನಾಥ ಪಾಟೀಲ್:- ಮಾನ್ಯ ಅಧ್ಯಕ್ಷರೆ, 1995ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ.

5. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 1995

ಶ್ರೀ ರೋಷನ್ ಬೇಗ್ (ಬೆಂಗಳೂರು ಅಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, 1995ನೇ

ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾಪ ಏನೆಂದರೆ :

''1995ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ರೋಷನ್ ಬೇಗ್:- ಮಾನ್ಯ ಅಧ್ಯಕ್ಷರೆ, 1995ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ: ಅ) ಕಾವೇರಿ ಜಲ ವಿವಾದಗಳ ಬಗ್ಗೆ.

ಶ್ರೀ ಹೆಚ್.ಎನ್.ನಂಜೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಮತ್ತು ಇನ್ನು ಕೆಲವು ಸನ್ಮಾನ್ಯ ಸದಸ್ಯರುಗಳು ಸೇರಿ ತಮಗೆ ವಿಶೇಷ ನಿರ್ಣಯವೊಂದನ್ನು ಕಳುಹಿಸಿಕೊಟ್ಟಿದ್ದೆವು. ಈ ನಿರ್ಣಯ ಕಳುಹಿಸತಕ್ಕಂಥ ಕಾಲದಲ್ಲಿ ಅದು ಖಾಸಗಿ ನಿರ್ಣಯವಾಗಿದೆ. ನಮಗೆ ಅವಕಾಶ ಕೊಡಿ ಎಂದು ನಾವು ಕೇಳಲಿಲ್ಲ. ಈ ವಿಧಿನಿಯಮಗಳನ್ನು ಬದಿಗೊತ್ತಿ ತಮ್ಮ ಅಧಿಕಾರವನ್ನು ಉಪಯೋಗಿಸಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಈ ವಿಶೇಷ ನಿರ್ಣಯವನ್ನು ಕಳುಹಿಸಿದ್ದೆವು.

ಅಧ್ಯಕ್ಷರು: ಈಗ ನಾನು ಏನು ಹೇಳುತ್ತೇನೆ ಎಂದರೆ....

ಶ್ರೀ ಹೆಚ್.ಎನ್.ನಂಜೇಗೌಡ:- ಒಂದು ನಿಮಿಷ, ನಾನು ಇದನ್ನು ಮಂಡಿಸುತ್ತಾ ಇಲ್ಲ. ಈ ವಿಶೇಷ ನಿರ್ಣಯ ಈ ರೀತಿ ಇದೆಯೆಂದು ಸಭೆಗೆ ಗೊತ್ತಾಗಿಬಿಡಲಿ ಎಂದು ಓದುತ್ತಾ ಇದ್ದೇನೆ; ''ಈವರೆಗೆ ಹಲವಾರು ಅಂತರ್‌ರಾಜ್ಯ ಜಲವಿವಾದಗಳು ಉದ್ಭವಿಸಿ ಸಮಂಜಸವಾದ ಹಾಗೂ ಅನುಷ್ಠಾನ ಯೋಗ್ಯವಾದ ಪರಿಹಾರ ಕಾಣದೆ ನೆನೆಗುದಿಗೆ ಬಿದ್ದಿದೆ. ಅಂತರ್‌ರಾಜ್ಯ ಜಲವಿವಾದಗಳಿಗೆ ಪರಿಹಾರ ಒದಗಿಸುವಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳು ಇಲ್ಲದೆ ಇರುವುದೇ ಇದಕ್ಕೆ ಮೂಲಭೂತ ಕಾರಣವಾಗಿದೆ. ಈ ಕಠೋರ ಸತ್ಯವನ್ನು ತಡವಾಗಿಯಾದರೂ ಮನಗಂಡು, ಕೇಂದ್ರ ಜಲಸಂಪನ್ಮೂಲ ಸಚಿವರು ಈ ದಿಸೆಯಲ್ಲಿ...'' ಒಂದು ನಿಮಿಷ ಓದುತ್ತೇನೆ ಬೇರೆ ಸದಸ್ಯರಿಗೆ ಗೊತ್ತಾಗಲಿ ಎಂದು.....

Mr.SPEAKER: We can take up the same resolution as a resolution of the whole House. I don't want to interrupt you.

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು):- ಸರ್, ಇಂತಹ ಯಾವುದೇ ವಿಶೇಷ ಸಂದರ್ಭದಲ್ಲಿ ನಿರ್ಣಯ ತರುವುದಕ್ಕೆ ಸಭೆಗೆ ಅಧಿಕಾರ ಇದೆ. ನಾನು ಅದರ ಬಗ್ಗೆ ಡಿಸ್‌ಪ್ಯೂಟ್ ಮಾಡುವುದಿಲ್ಲ. ಅಂದರೆ ಖಾಸಗಿ ನಿರ್ಣಯ ಮಂಡನೆ ಮಾಡುವುದಾದರೆ 7 ದಿನಕ್ಕಿಂತ ಮುಂಚೆ ಕೊಡಬೇಕು ಮತ್ತು ಬ್ಯಾಲೆಟ್ ಇವೆಲ್ಲ ಸಮಸ್ಯೆಗಳು ಬರುತ್ತವೆ. ಕಾವೇರಿ ಜಲನೀತಿ ಬಗ್ಗೆ ರಾಜ್ಯದ ಹಿತದೃಷ್ಟಿಯಿಂದ ನಿರ್ಣಯ ತರಬೇಕೆಂದು ಹಿರಿಯ ಸದಸ್ಯರು ಸೇರಿ ಸದನದ ಎಲ್ಲರ ಅಭಿಪ್ರಾಯ ಇದ್ದರೆ, ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ ಎಲ್ಲಾ ಗೌರವಾನ್ವಿತ ವಿರೋಧ ಪಕ್ಷದ